## ಮಾರುಹೋಗುವಂತೆ ಮಾಡುವ ಮಾರುವೇಷ

ಟೀವಿ9ರಲ್ಲಿ ಪ್ರಕಟವಾಗುವ 'ಮಾರು ವೇಷ' ಕಾರ್ಯಕ್ರಮ ವೀಕ್ಷಕರ ಮನ ಮಿಡಿಯುತ್ತದೆ. ಪ್ರತಿ ಪ್ರಸಾರ ಒಂದಿಬ್ಬರ ಸಂಸಾರವನ್ನು ನಿಮ್ಮದಿಯ ಉಸಿರಾಡುವಂತೆ ಮಾಡುತ್ತಿರುವುದು ಪ್ರಶಂಸನೀಯ. ಇದು ಕೇವಲ ಜಾಹೀರಾತಿನಂತಿರದೆ ಒಬ್ಬ ನತದೃಷ್ಟನ ಬದುಕಿನ ಕಠೋರತೆಯನ್ನು ದಾರುಣ ಬದುಕನ್ನು ಕಟ್ಟಿಕೊಡುತ್ತದೆ. ನೋಡಿದವರಲ್ಲಿ ಏನಾದರೂ ಸಹಾಯ ಮಾಡಲು ಹೃದಯ ಸ್ಪಂದಿಸುವಂತೆ ಮಾಡುತ್ತದೆ. ಇಗೀಗ ಕೇವಲ ಬಡಿದಾಟ ಹೊಡೆದಾಟ ಬೈಗಳು ಮತ್ತು ರಾಜಕೀಯ ಕೆಸರು ಎರಚಾಟ ನೋಡಿ ನಮ್ಮ ನಾಯಕರೇ ಇವರು? ಎಂದು ಖೇದಿಸುವಂತೆ ಮಾಡುತ್ತಿರುವ ಕಾರ್ಯಕ್ರಮಗಳ ಕಾರ್ಮೋಡದಲ್ಲಿ ಮಿಂಚಂತೆ ಮಾರುವೇಷ ಕಣ್ಣುಕುಕ್ಕುತ್ತದೆ. ಒಂದು ದಿನ ಒಬ್ಬರ ಪ್ರತಿಷ್ಠೆಯನ್ನು ಬತ್ತಲೆ ಮಾಡಿದರೆ ಮತ್ತೊಂದು ದಿನ ಅದೆ ವ್ಯಕ್ತಿಗೆ ವಜ್ರದ ಕಿರೀಟ ತೊಡಸಿ ವಿಜೃಂಭಿಸುವ ವಂದಿಮಾಗದನಾಗುತ್ತ 'ಆರು ಕೊಟ್ಟರೆ ಅತ್ತೆ ಕಡೆ ಮೂರು ಕೊಟ್ಟರೆ ಸೊಸೆ ಕಡೆ' ಎನ್ನುವ ನಡೆಯಿಂದ ಬೋರ್ ಹೊಡೆಯುತ್ತಿರುವಾಗ ಇಂತಹ ಕಾರ್ಯಕ್ರಮ ವಾಹಿನಿಗಳಿಗೆ ಕಾಯಕಲ್ಪ ಆದೀತು ಮಾರುವೇಷಕ್ಕೆ ಅಭಿನಂದನೆಗಳು

—ಸತ್ಯಬೋಧ ಬೆಂಗಳೂರು

ವಾರದ ಪತ್ರ

## ಒಂದು ಸೇಬಿನ ಕಥೆ

ನಿಜವಾಗಲೂ ಒಂದು ಸೇಬು ಹಣ್ಣನ್ನು ಹಂಚಿ ತಿಂದ ಚೈತ್ರ ಕೊಟ್ಟೂರು ಅವರನ್ನು ಚಂದನ್ ಹಾಗೂ ಸುಜಾತಾ ನಡೆಸಿಕೊಂಡ ರೀತಿ ಮನಸ್ಸಿಗೆ ತುಂಬಾ ಕಿರಿಕಿರಿ ಉಂಟಾಯಿತು ಎಂದರೆ ತಪ್ಪಲ್ಲ. ಶನಿವಾರದ ಇಡೀ ಸಂಚಿಕೆಯಲ್ಲಿ ಸುದೀಪ್ ಅದಕ್ಕಾಗಿ ಹೆಚ್ಚು ಸಮಯ ತೆಗೆದುಕೊಂಡಿದ್ದು ನೋಡಿದರೆ ಅದು ನಿಜವೇ ಅನಿಸಿತು. ಅದರಲ್ಲೂ ಚೈತ್ರ ರವರು ಎಲ್ಲಿ ಹೋದರೂ ಬಿಡದೆ ಅವರನ್ನು ಹಿಂಬಾಲಿಸಿಕೊಂಡು ಹೋಗಿ ಕಿರಿ ಕಿರಿ ಉಂಟುಮಾಡಿದ ಚಂದನ್ ನನ್ನು ಕಂಡರೆ ಮೈ ಉರಿಯುವಂತೆ ಮಾಡಿತು. ಶ್ರೀಮಂತಿಕೆಯ ಕುಟುಂಬದಲ್ಲಿ ಜನಿಸಿರಬಹುದು, ಅದನ್ನು ಒಂದು ವೇದಿಕೆಯಲ್ಲಿ ತೋರಿಸಿಕೊಂಡಿದ್ದು ಸುಜಾತಾರವರ ಸಣ್ಣ ತನವನ್ನು ಎತ್ತಿತೋರಿಸಿತು ಎಂದರೆ ತಪ್ಪಲ್ಲ, ಅವರಿನ್ನೂ ರಾಧಾ ರಮಣ ಧಾರಾವಾಹಿಯಿಂದ ಹೊರಬಂದಿಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಎಲ್ಲದರಲ್ಲೂ ನಾನೇ ಸರಿ ಎಂಬುದು ಯಾವತ್ತು ಸರಿ ಅಲ್ಲ ಎಂಬುದು ನನ್ನ ಭಾವನೆ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು.

## ಮರುಪ್ರಸಾರ ಮಾಡಿ

ಚಂದನದಲ್ಲಿ 'ಶುಭೋದಯ' ಕಾರ್ಯಕ್ರಮ ಪ್ರಸಾರವಾಗುತ್ತಿರುವುದು ಸಂತೋಷದ ವಿಷಯ. ಆದರೆ 10.30 ಕ್ಕೆ ಪ್ರಸಾರವಾಗುತ್ತಿದ್ದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಹಾಗೂ 12.30 ಕ್ಕೆ ಬರುತ್ತಿದ್ದ 'ಥಟ್ ಅಂತ ಹೇಳಿ' ಕಾರ್ಯಕ್ರಮ (ಮರು ಪ್ರಸಾರ) ನಿಂತಿರುವುದು ತುಂಬಾ ನಿರಾಸೆ ತಂದಿದೆ. ಕಾರಣ, ಜೀವನದ ಜಂಜಾಟದಿಂದ ಹೊರಗೆ ಬಂದು ಕುಳಿತು ನೆಮ್ಮದಿಯಿಂದ ನೋಡುತಿದ್ದ ಈ ಎರಡೂ ಕಾರ್ಯಕ್ರಮ ತಪ್ಪಿ ಹೋಗಿವೆ. ಇದು ತಾತ್ಕಾಲಿಕವಾಗಲಿ ಎಂಬುದು ನಮ್ಮ ಆಸೆ. ಆ ಸಮಯದಲ್ಲಿ ಚಲನಚಿತ್ರ ಪ್ರಸಾರವಾಗುತ್ತಿರುವುದು ಮತ್ತಷ್ಟು ಕಿರಿ ಕಿರಿ ಉಂಟು ಮಾಡಿದೆ. ದಿನಕ್ಕೆ 24 ತಾಸು ಚಲನಚಿತ್ರ ಪ್ರಸಾರ ಮಾಡುವ ಖಾಸಗಿ ಚಾನೆಲ್ ಇರುವಾಗ, ಬೆಳಗಿನ ಹೊತ್ತಿನಲ್ಲಿ ಚಂದನದವರೂ ಚಲನಚಿತ್ರಕ್ಕೆ ಮೊರೆ ಹೋಗಬೇಕೇ?

—ಸುಜಯ ಕೃಷ್ಣ ಬೆಂಗಳೂರು

## ಹಳಿತಪ್ಪದಿರಲಿ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯ ಸಂಕಲನ ವೀಕ್ಷಕರ ತಾಳ್ಮೆ ಪರೀಕ್ಷಿಸುವಂತಿದೆ. ಕೋರ್ಟ್‌ನಲ್ಲಿನ ವಾಟೀಸವಾಲಿನ ಪ್ರಶ್ನೆಗಳನ್ನು ಅರ್ಧದಲ್ಲಿ ಬಿಟ್ಟು ಮನೆಯಲ್ಲಿನ ಸಂವಾದ ತೋರಿಸುವುದು. ಮತ್ತೆ ಅದರ ನಂತರ ಕೋರ್ಟ್‌ನ ದೃಶ್ಯ ಮುದುವರೆಸುವುದು. ಕೋರ್ಟ್‌ನಲ್ಲಿರುವ ಸಂಜನಾ ಮನೆಯಲ್ಲಿನ ದೃಶ್ಯದಲ್ಲಿರುವುದು. ಮತ್ತೆ ಮುಂದಿನಭಾಗದಲ್ಲಿ ಕೋರ್ಟ್‌ನಲ್ಲಿ ಕಂಡುಬರುವುದು.

ಹೀಗೆ ದೃಶ್ಯಗಳ ಕೊಂಡಿ ಕಳಚುವುದು ಕಥೆಯ ಮುಂದುವರಿಕೆಗೆ ತಡೆಯೊಡ್ಡುತ್ತಿದೆ. ಹಾಗೆಯೇ ವೀಕ್ಷಕರ ತಾಳ್ಮೆಯನ್ನೂ ಪರೀಕ್ಷಿಸುತ್ತಿದೆ. ನಿರ್ದೇಶಕರು ಈ ಬಗ್ಗೆ ಗಮನ ಹರಿಸಬೇಕಾಗಿ ವಿನಂತಿ ಹಾಗೆಯೇ ಸುಂದರಮೂರ್ತಿ, ಶ್ಯಾಮಲತ್ತೆ ಹಾಗೂ ಹೊಸ ಅಸಿಸ್ಟೆಂಟ್ ಲಾಯರ್‌ನ ಹಳಸಿದ ಜೋಕ್‌ಗಳನ್ನೂ ಕೈಬಿಡಬೇಕಾಗಿ ವಿನಂತಿ. ಈ ಧಾರಾವಾಹಿ ಏಕೆ ಹಳಿತಪ್ಪುತ್ತಿದೆಯೋ ತಿಳಿಯುತ್ತಿಲ್ಲ.

—ಗೀತಾ ನೆಲ್ಲಿಕಾಯಿ

## ವಾಸ್ತವಿಕತೆ ಉಳಿಸಿಕೊಳ್ಳಿ

'ಜೊತೆ ಜೊತೆಯಲಿ' ಧಾರಾವಾಹಿ ಹೊಸ ಬಗೆಯ ಕತೆಯನ್ನು ಹೊಂದಿ ಚೆನ್ನಾಗಿ ಮೂಡಿಬರುತ್ತಿದ್ದರೂ ಆರಂಭದಲ್ಲೇ ಕೆಲವು ಅಪಸವ್ಯಗಳು ಗೋಚರಿಸ ತೊಡಗಿವೆ. ಧಾರಾವಾಹಿಯ ನಾಯಕ ಆರ್ಯವರ್ಧನ ಬಡವರ ಹಾಗೂ ಮಧ್ಯಮ ವರ್ಗದವರ ಬಗ್ಗೆ ಅನುಕಂಪ ಹೊಂದಿದ ವ್ಯಕ್ತಿಯಾಗಿದ್ದರೂ ಮಧ್ಯಮ ವರ್ಗದವರನ್ನು ಅವಹೇಳನಕ್ಕೆ ಗುರಿಪಡಿಸುವಂತಹ ಅನೇಕ ಸನ್ನಿವೇಶಗಳು ಇಲ್ಲಿವೆ. ಅನುವಿನ ತಂದೆತಾಯಿ ಆರ್ಯವರ್ಧನ್ ಏರ್ಪಡಿಸಿದ್ದ ಪಾರ್ಟಿಗೆ ಹೋದಾಗ, ಅನುವಿನ ತಾಯಿ ಪಾರ್ಟಿಯಲ್ಲಿ ದನ ತಿಂದಂತೆ ತಿನ್ನುವುದು ಮತ್ತು ಮಡಿಕೆಗಳನ್ನು ಚೀಲದಲ್ಲಿ ತುಂಬಿಕೊಂಡು ಮನೆಗೆ ತೆಗೆದುಕೊಂಡು ಹೋಗುವುದು. ಸುಬ್ಬು ಕುಡಿದು ಸೀರೆ ಉಟ್ಟುಕೊಂಡು ಅಲ್ಲಿ ನೆರೆದವರಿಗೆ ಮನೋರಂಜನೆ ನೀಡುವುದು. ಅನುವಿನ ತಾಯಿ ಆರ್ಯವರ್ಧನ್ ಚೇಂಬರಿಗೆ ಹೋದಾಗ ಸೋಫಾದಲ್ಲಿ ಕುಣಿದು ಕುಪ್ಪಳಿಸುವುದು ಇವೆಲ್ಲ ತೀರ ಅವಾಸ್ತವಿಕ ಸಂಗತಿಗಳು. ಸಾಮಾನ್ಯವಾಗಿ ಮಧ್ಯಮವರ್ಗದವರು ಹಾಗೆ ವರ್ತಿಸುವುದಿಲ್ಲ. ತಮ್ಮ ಪರಿಧಿಯ ಹೊರಗಿನ ಸ್ಥಳಗಳಿಗೆ ಹೋದಾಗ ಅವರು ತುಂಬಾ ಗಂಭೀರರಾಗಿರುತ್ತಾರೆ. ಹೊಸ ವಾತಾವರಣದಲ್ಲಿ ಸ್ವಲ್ಪ ಆತಂಕಿತರಾದರೂ ಅಲ್ಲಿಯ ಮ್ಯಾನರಿಜಂ ತಮಗೆ ಗೊತ್ತೇ ಇಲ್ಲ ಎನ್ನುವಂತೆ ತೋರಿಸಿಕೊಳ್ಳುವುದಿಲ್ಲ. ಟೇಬಲ್ ಮ್ಯಾನರಿಜಂಗಳನ್ನು ಬೇರೆಯವರನ್ನು ನೋಡಿ ಅನುಕರಿಸುತ್ತಾರೆ. ಒಂದು ಕಂಪನಿಯ ಚೇರ್ಮನ್ ತಮ್ಮ ಸ್ಟಾಫಿನ ಜೊತೆ ಹೆಚ್ಚು ಸಂಬಂಧವನ್ನೇ ಹೊಂದಿರುವುದಿಲ್ಲ. ತಮ್ಮ ಕಂಪನಿಯ ಆಫೀಸಿನಲ್ಲಿ ಕೆಲಸ ಮಾಡುವ ಎಲ್ಲ ಸಿಬ್ಬಂದಿಗಳ ನಿಕಟ ಪರಿಚಯವೂ ಅವರಿಗೆ ಇರುವುದಿಲ್ಲ. ಎಲ್ಲ ಸಿಬ್ಬಂದಿಯನ್ನು ನಿಭಾಯಿಸುವುದು ಆಫೀಸಿನ ಮೇನೇಜರ್. ಆರ್ಯವರ್ಧನ್ ಅನುವಿನ ಬಗ್ಗೆ ತೋರಿಸುವಂತಹ ಉದಾರತೆಯನ್ನು ಯಾವ ಕಾರ್ಪೋರೇಟರ್ ತನ್ನ ಸ್ಟಾಫಿನ ಬಗ್ಗೆ ತೋರಿಸುವುದಿಲ್ಲ. ಅನು ಕೆಲಸಕ್ಕೆ ಸೇರಿದ ದಿನವೇ ಅವಳಿಗೆ ಬೋನಸ್ ನೀಡುವುದು ಹರ್ಷವರ್ಧನ್ ವಿಧಾನಸೌಧದ ಖರೀದಿಗೆ ಅಡ್ವಾನ್ಸ್ ನೀಡುವುದು ತೀರಾ ಹಾಸ್ಯಾಸ್ಪದ ಸಂಗತಿಗಳು.

—ಮುರಲೀಧರ ಕುಲಕರ್ಣಿ, ಬೀದರ್

## ಇರಲಿ ಒಂದಿಷ್ಟು ಸಹ್ಯ

ಝೀ ಕನ್ನಡದಲ್ಲಿ ಇತ್ತೀಚೆಗೆ ಪ್ರಸಾರವಾದ 'ಝೀ ಕುಟುಂಬ ಅವಾರ್ಡ್ಸ್ 2019' ತುಂಬಾ ಚೆನ್ನಾಗಿತ್ತು. ಆದರೆ 'ಬೆಸ್ಟ್ ಸಹೋದರ' ಅವಾರ್ಡ್ಸ್ ಸಂದರ್ಭದಲ್ಲಿ ವೇದಿಕೆಯ ಮೇಲೆ ಇಬ್ಬರು ಸಹೋದರರಿಗೂ ಒಬ್ಬ ಸೆಕ್ಯೂರಿಟಿ ಬಂದು ಅವರನ್ನ ಸ್ಕ್ಯಾನ್ ಮಾಡಿದಾಗ ಎಲ್ಲರಿಗೂ ಕಾಣುವ ರೀತಿ ಪರದೆ ಹಿಂದೆ ಒಳ ಉಡುಪು ತೋರಿಸುವುದು, ಅನುಶ್ರೀ ಹಾಗೂ ಆನಂದ್ ಇಬ್ಬರೂ ಅದರ ಬಗ್ಗೆ ಅಸಹ್ಯವಾದ ಶಬ್ದಗಳನ್ನು ಆಡುತ್ತಿದ್ದುದು ತುಂಬಾ ಅಸಹನೀಯ. ಏಕೆಂದರೆ ಮನೆ ಮಂದಿಯೆಲ್ಲಾ ಕುಳಿತು ನೋಡುವ ಕಾರ್ಯಕ್ರಮದಲ್ಲಿ ಈರೀತಿ ಮಾಡಿದರೆ ತುಂಬಾ ಮುಜುಗರವೆನಿಸುತ್ತಿತ್ತು. ಆದಷ್ಟು ಈ ರೀತಿಯ ಸನ್ನಿವೇಶಗಳನ್ನು ಪ್ರಸಾರ ಮಾಡದೇ ಇರುವುದು ಒಳಿತು.

—ಅಂಜನ್ ಕುಮಾರ್ ಕೋಲಾರ